ಇನ್ನು ಮುಂದೆ ನಾನು ಅಕ್ಷೇಪಣೆ ಮಾಡಬಾರದು ಎಂದು ಮನಸ್ಸು ಮಾಡಿದ್ದೆ. ತಪ್ಪು ನಿಮ್ಮದಲ್ಲ; ನಿಮ್ಮನ್ನು ಅಧಿಕಾರಕ್ಕೆ ಏರಿಸಿದ ಆ ಜನತೆಯದು ತಪ್ಪು ಈ ತಮ್ಮ ಹೇಳಿಕೆಗಳನ್ನು ಅಪದ್ಧ ಭರವಸೆಗಳನ್ನು ನಂಬಿದರು. ನಾನು 5 ವರ್ಷಗಳ ಹಿಂದೆ ಹೇಳಿದ ಮಾತು ಇಂದು ಸತ್ಯವಾಯಿತು. 5 ವರ್ಷಗಳ ಹಿಂದೆ ಬೇರೆ ಒಂದು ವಾತನ್ನು ಮುಖ್ಯಮಂತ್ರಿಗಳಿಗೆ ಹೇಳಿದೆ. ನಿಮ್ಮ ಹೆಸರನ್ನು ಕಪ್ಪು ಅಕ್ಷರಗಳಲ್ಲಿ ಬರೆಯುತ್ತಾರೆ. ಈ ಕೃಷ್ಣಾ ಗೋದಾವರಿ ನೀರಿನ ವಿಷಯದಲ್ಲಿ, ಮುಂದೆ ನಿಮ್ಮನ್ನು ದೇಶದ್ರೋಹಿಗಳು ಎಂದು ಕರೆಯುತ್ತಾರೆ ಎಂದು ಹೇಳಿದೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಇನ್ನೂ ಗಟ್ಟಿಯಾಗಿ ತಮ್ಮ ಮನಸ್ಸಿಗೆ ಬಂದದ್ದು ಹೇಳಿಕೊಂಡು ಹೋಗಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಗಟ್ಟಿಯಾಗಿ ಅಲ್ಲ, ಏನು ಹೇಳಬೇಕಾಗಿದೆಯೋ ಅದನ್ನು ಹೇಳುತ್ತಾ ಇದ್ದೇನೆ ಅಷ್ಟೆ.

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ತಾವು ಹೇಳತಕ್ಕ ಉದ್ದೇಶ ಏನು ಅಂತ ಅನ್ನುವುದು ನನಗೆ ಗೊತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ರಾಜಕೀಯ ಅಂತ ಇವತ್ತೂ ಹೇಳುತ್ತೀರಿ, ಅವತ್ತೂ ಹೇಳಿದಿರಿ, ಇದು ಗೋಬೆರ್ಸ್ ಪ್ರಾಪಗ್ಯಾಂಡ ಅಲ್ಲ.

ಅವತ್ತೇ ನಾನು ಹೇಳಿದೆ ನಿಮಗೆ ಕೃಷ್ಣಾ ಗೋದಾವರಿ ನದಿಯ ನೀರಿಲ್ಲ ಎಂದು, ತಮ್ಮ ಉತ್ತರದಲ್ಲಿ ಏನು ಹೇಳಿದ್ದೀರಿ ಎಂಬುದನ್ನು ಸ್ವಲ್ಪ ನೋಡಿ, 499 ಟಿ. ಎಂ. ಸಿ. ಎಫ್. ಟಿ. ನೀರು ಉಪಯೋಗ ಆಗಿ ಹೋಗಿದೆ, 50 ಟಿ.ಎಂ.ಸಿ.ಎಫ್.ಟಿ. ನೀರು ಕಾಡಿಯುವುದಕ್ಕೆ ಬೇಕು, 60 ಟಿ.ಎಂ.ಸಿ.ಎಫ್.ಟಿ. ನೀರು ಕೈಗಾರಿಕೆಗಳಿಗೆ ಬೇಕು ಎಂದು ಹೇಳಿದ್ದೀರಿ. 110 ಮತ್ತು 499 ಒಟ್ಟು ಎಷ್ಟಾಯಿತು ಲೆಕ್ಕ ಮಾಡಿದ್ದೀರಾ ? ಮುಖ್ಯ ಮಂತ್ರಿಗಳಿಗೆ ಅದರ ಮೇಲೆ ಗಮನವೇ ಇಲ್ಲ. ಲೆಕ್ಕ ಮಾಡಿ, ಒಟ್ಟು 609 ಟಿ.ಎಂ.ಸಿ.ಎಫ್.ಟಿ. ಆಯಿತು ನಿಮಗೆ ಕೊಟ್ಟಿರುವುದು, ನಿಮ್ಮಲ್ಲಿ ಇರುವುದು 600 ಟಿ.ಎಂ.ಸಿ.ಎಫ್.ಟಿ. ಏಕೆ ಈ ಅಪದ್ಧವನ್ನು ಹೇಳುತ್ತೀರಿ ? ಕೃಷ್ಣಾ ಮಾಡುತ್ತೇವೆ, ಗೋದಾವರಿ ಮಾಡುತ್ತೇವೆ ಅಂತ ?

Sri S. D. KOTHAVALE (Sankeshwar).—It is only an interim arrangement !

Sri H. M. CHANNABASAPPA.—My dear friend, you do not know the head or tail of Krishna waters.

Sri S. D. KOTHAVALE.—I am going to speak after you.

Sri H. M. CHANNABASAPPA.—Sir, he is a good friend of mine. He wants me to speak on that point and therefore he wants to provoke me. I am speaking on facts, on the facts of the reports of the Government.

Sri G. DUGGAPPA (Bharmasagar).—Sir, I rise to a Point of Order. Some members in this House are engaged in private talk. Is it allowed and can it be tolerated ?

SPEAKER'S RULING *re*: PRIVATE TALK IN THE HOUSE

Mr. SPEAKER.—I will give the Ruling. A Point of Order is raised by hon'ble member Sri Duggappa. He has raised a question as to whether there can be private conversation inside the House. Throughout the day today, I have been nourishing an idea arising out of a legal observation—the observation is what is called the coparcenery within a coparcenery. I find a group of members talking to each other, which

(Mr. SPEAKER)

appeared to me like an assembly in an Assembly. The point is, whether they could or could not talk. They should do it in such a low voice that others are not disturbed; the work of the House should not be disturbed. I cannot prohibit them from talking to each other. The parliamentary convention is that conversation that might essentially be carried on should be in a low tone not to be heared by anybody else and should not disturb the House. That is a well-known fact.

BUDGET ESTIMATES FOR 1967-68—DEMANDS FOR GRANTS

(Debate—Contd.)

ಶ್ರೀ ಎಚ್. ಎಂ. ಚನ್ನಬಸಪ್ಪ.—ತಪ್ಪು ಹೇಳಿಕೆ, ಅಪದ್ಧ ಹೇಳಿಕೆಗಳಿಗೆ ತಮ್ಮಲ್ಲಿ ಅಭಾವವೇ ಇಲ್ಲ. ಮೊನ್ನೆ ತಾನೆ ಹೋದ ಸಲ ಮಾತನಾಡಿದಾಗ ಈ ಪ್ರಿಂಟ್ ಆದ ಹೇಳಿಕೆಗಳನ್ನು ನಾನು 4 ವರ್ಷದ ಹಿಂದೆಯೇ ಹೇಳಿದ್ದೆ, ನಾಗಾರ್ಜುನಸಾಗರದ ವಿಷಯದಲ್ಲಿ ಇಂದು ಏನು ಬಂದಿದೆಯೋ ಅದನ್ನು ತಮ್ಮ ಮುಂದೆ ಇಟ್ಟೆ, ಇದಕ್ಕಿಂತಲೂ ಸಾಧ್ಯತೆ ಬೇಕೇ ಎಂದು ಕೇಳುತ್ತೇನೆ.

ಕೃಷ್ಣಾ ನದಿ ನೀರಿನ ವಿಷಯದಲ್ಲಿ ನಾವು ಮೇಲ್ಗಡೆ ಇದ್ದೇವೆ ಎಂದು ಹೇಳಿದ್ದೂ ಹೇಳಿದ್ದೆ! 4 ವರ್ಷದ ಹಿಂದೆ ಮುಖ್ಯ ಮಂತ್ರಿಗಳು ಏನ್ರಿ ನಾವು ಮೇಲೆ ಇದ್ದೇವೆ ನಮಗೆ ಯಾವ ತೊಂದರೆಯೂ ಬರುವುದಿಲ್ಲ ಎಂದರು. ಅದನ್ನು ತಿಳಿದೂ ಅಪಪ್ರಚಾರ ಮಾತನಾಡುತ್ತಾರಲ್ಲಾ ಅಂತ ಅನಿಸುತ್ತದೆ. ನಿನ್ನೆ ಕೂಡ ಹೇಳಿದರು ಪುನ: ಆ ತಪ್ಪನ್ನು ಉಚ್ಚಾರ ಮಾಡಿದರು, ನಾವು ಮೇಲಿದ್ದೇವೆ ಎಂಬುದು ನಮಗೆ ಗೊತಿಲ್ಲವೇ, ಸಿದ್ದಎರಪ್ಪನವರು ಹೇಳಿದರು ಅಂತ ದಂಡು ದಾಳಿ ತೆಗೆದುಕೊಂಡು ಹೋಗುತ್ತಿಲ್ಲ ಅಂತ, ನಾನು ತಮ್ಮಲ್ಲಿ ಅರಿಕೆ ಮಾಡುವುದು ತಾವು ಸರ್ಕಾರದ ಕೆಲಸ ಮಾಡಿರಿ, ನೀರಿನ ವಿವಾದದ ವಿಷಯದಲ್ಲಿ ಯಾರಿಗೆ ಪ್ರಯಾರಿಟಿ ಇದೆ ಎಂಬುದು ಪ್ರಪಂಚದ ಎಲ್ಲಾ ಸರ್ಕಾರಗಳೂ ಒಪ್ಪಿಕೊಂಡಿರ ತಕ್ಕ ತತ್ವಗಳು

> "As between the appropriators, time has the first right and that appropriation is superior to all other appropriations and subordinate to all that were made in earlier times."

ಇದು ಗೊತ್ತಿಲ್ಲದೇ ಇದ್ದರೆ ನಾನು ಏನು ಹೇಳಲಿ! ನಾವು ಶಾಸನಬದ್ಧವಾಗಿ, ರಾಜ್ಯಾಂಗದ ಆಧಾರದ ಮೇಲೆ ಕೆಲಸ ಮಾಡುತ್ತಾ ಇದ್ದೇವೆಯೇ ಹೊರತು ದಂಡು ದಾಳಿಯ ಮೇಲೆ ಅಲ್ಲ. ಒಂದು ತಡವೆ ಯಾವ ರಾಜ್ಯದವರು ನೀರನ್ನು ಉಪಯೋಗಮಾಡಿಬಿಡುತ್ತಾರೆಯೋ ಅವರಿಗೆ ಹಕ್ಕು ಬಂದು, ಅವರ ಹಕ್ಕನ್ನು ಮನ್ನಣೆ ಮಾಡಿ ಮೇಲ್ಗಡೆ ಕಟ್ಟಬೇಕೇ ವಿನಾ ನಾವು ಮೇಲೆ ಇದ್ದೇವೆ ಅಂತ ದಂಡು ದಾಳಿ ತೆಗೆದುಕೊಂಡು ಹೋಗಿ ಕಟ್ಟುವುದಕ್ಕಾಗುವುದಿಲ್ಲ. ಇದನ್ನು ಸಾರಿ ಸಾರಿ ಹೇಳುತ್ತಾ ಇದ್ದೇನೆ, ತಿಳಿದೂ ಇದ್ದೀರಿ, ಇವತ್ತು ತಿಳಿದುಕೊಳ್ಳಿ, ಇನ್ನು ಮೇಲಾದರೂ ಆ ಮಾತು ಆಡಬೇಡಿ, ಆ ಅಪದ್ಧವನ್ನು ಮೊನ್ನೆ ಹೇಳಿದಿರಿ, ನಾವು ವರ್ಲ್ಡ್ ಬ್ಯಾಂಕ್ ಲೋನ್ ಕೇಳಿದ್ದೇವೆ, ಕೇಂದ್ರಸರ್ಕಾರದವರು ಕೊಡಿಸುತ್ತಾರೆ ಎಂಬ ಭರವಸೆ ಇದೆ ಎಂದು ವ್ಯವಹಾರ ನಡೆಯುತ್ತಾ ಇದೆ, ಅಪ್ಪರ್ ಕೃಷ್ಣಾ ಯೋಜನೆಗೆ 100-200 ಕೋಟಿ ರೂಪಾಯಿ ಬರುತ್ತದೆ ಎಂದು ಜನ ನಂಬಿದರು, ನಾನೂ ನಂಬಿದೆ, ಇವತ್ತಿನವರೆಗೂ ನಂಬಿದ್ದೇ. ಇವತ್ತಿನ ದಿನ ಬೆಳಿಗ್ಗೆ ಡೆಕ್ಕನ್ ಹೆರಾಲ್ಡ್ ಪೇಪರ್‌ನಲ್ಲಿ :

World Bank Loan for Upper Krishna Project.—

> "No move to get help from World Bank--Irrigation Minister, Dr. K. L. Rao, informed Sri S. P. Patil in the Lok Sabha, to day that the Central Government Was not exploring the possibility of securing the World Bank aid to the tune of 100-200 crores for Upper Krishna Project."